**ಸಾಕ್ಷಿಗೆ ದಿನಾಂಕಃ31-07-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು :: ಆರೋಪಿ ಪರ ಶ್ರೀ. TDK ವಕೀಲರಿಂದ ::**

ನಾನು ಹೇಳುತ್ತಿರುವ ವ್ಯವಹಾರ ಆಗುವ ಪೂರ್ವದ ಸುಮಾರು ವರ್ಷಗಳಿಂದ ಆರೋಪಿ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ವಾಸ ಮಾಡಿಕೊಂಡಿದ್ದರು ಎಂದರೆ ಸರಿ. ನಾನು ನಿಪಿ3 ನೋಟೀಸ್ ಅನ್ನು ಯಾವ ವಿಳಾಸಕ್ಕೆ ಕಳುಹಿಸಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಆರೋಪಿಗೆ ನೋಟೀಸ್ ಕಳುಹಿಸಲು ಮಾಹಿತಿಯನ್ನು ನಾನೇ ವಕೀಲರಿಗೆ ನೀಡಿರುತ್ತೇನೆ ಎಂದರೆ ಸರಿ. ನೋಟೀಸ್ ಅನ್ನು ಆರೋಪಿಗೆ ಯಾವ ದಿನಾಂಕದಂದು ಕಳುಹಿಸಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನಾನು ವಕೀಲರ ಮೂಲಕ ಕಳುಹಿಸಿದ ನೋಟೀಸ್ ಆರೋಪಿ ಪಡೆಯದ ಕಾರಣ ಹಿಂದಿರುಗಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ನಿಪಿ3 ರಲ್ಲಿ ಇರುವ ವಿಳಾಸವನ್ನೇ ನಮೂದಿಸಿ ಈ ಪಿರ್ಯಾದನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಯ ಆಧಾರ್ ಕಾರ್ಡ್ ನಲ್ಲಿ ಇದ್ದ ವಿಳಾಸ ನಮೂದಿಸಿ ದೂರನ್ನು ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯ ಆಧಾರ್ ಕಾರ್ಡ್ ನಲ್ಲಿ ಇರುವ ವಿಳಾಸ ನನಗೆ ಈಗ ನೆನಪಿಲ್ಲ. ನಿಪಿ5 ರಂತೆ ನೋಟೀಸ್ ಆರೋಪಿಯು ಊರಿನಲ್ಲಿ ಇಲ್ಲದ ಕಾರಣ ಹಿಂದಿರುಗಿಸಲಾಗಿರುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ.

ನಿಪಿ3 ನೋಟೀಸ್ ಅನ್ನು ದಿಃ 12.09.2023 ರಂದು ನೀಡಲಾಗಿರುತ್ತದೆ ಎಂದರೆ ಸರಿ. ನಿಪಿ5 ಅಂಚೆ ಲಕೋಟೆಯು ನನಗೆ ದಿನಾಂಕ 15.09.2023 ರಂದು ಬಂದಿರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ. ನಿಪಿ5 ರಲ್ಲಿ 15.09.2023 ರಂದು ನೋಟೀಸ್ ಹಿಂದಿರುಗಿರುತ್ತದೆ ಎಂದು ಸೀಲ್ ಕಂಡು ಬರುತ್ತದೆ ಎಂದರೆ ಸರಿ. ನಂತರದಲ್ಲಿ ಆರೋಪಿಯ ಕೆಲಸದ ವಿಳಾಸಕ್ಕೆ ನನಗೆ ನೋಟೀಸ್ ಕೊಡಲು ತೊಂದರೆ ಇತ್ತೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಕೆಲಸದ ವಿಳಾಸ ನಿಖರವಾಗಿ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿಗೆ ನೋಟೀಸ್ ಜಾರಿ ಆಗವುದನ್ನು ತಪ್ಪಿಸಲು ಆರೋಪಿಯ ತಪ್ಪು ವಿಳಾಸವನ್ನು ನೀಡಿ ನೋಟೀಸ್ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಬ್ಯಾಂಕ್ ಖಾತೆಯಿಂದ ಆರೋಪಿ ಖಾತೆಗೆ ಯಾವುದೇ ಹಣ ಹೋಗಿರುವುದಿಲ್ಲ ಎಂದರೆ ಸರಿ. ನಾನು ಹೇಳುತ್ತಿರುವಂತೆ ನನ್ನ ತಂದೆ ಖಾತೆಯಿಂದ ಆರೋಪಿ ಖಾತೆಗೆ ಹಣ ಹೋಗಿರುತ್ತದೆ ಎಂದರೆ ಸರಿ. ಆದಕಾರಣ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರಭುಕುಮಾರ್ ಎನ್ನುವವರು ದುರುದ್ದೇಶದಿಂದ ಆರೋಪಿ ನನ್ನ ತಂದೆಗೆ ನೀಡಿದ ಖಾಲಿ ಸಹಿ ಮಾಡಿದ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣಗಳನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ1 ಮತ್ತು 7 ಚೆಕ್ ಗಳಲ್ಲಿ ಇರುವ ಸಹಿಗಳ ಮತ್ತು ಇತರೇ ಬರವಣಿಗೆಗಳ ಶಾಯಿಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಿಪಿ1 ಮತ್ತು 7 ರಲ್ಲಿ ಇರುವ ಸಹಿ ಹೊರತುಪಡಿಸಿ ಇತರೇ ಬರವಣಿಗೆಗಳನು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ7 ಚೆಕ್ ಬ್ಯಾಂಕಿನಿಂದ ಹಿಂದಿರುಗಿದ ಬಗ್ಗೆ ನಾನು ಆರೋಪಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಂತರದಲ್ಲಿ ಆರೋಪಿ ನನ್ನ ಜೊತೆ 10 ಲಕ್ಷ ಹಣಕ್ಕೆ ರಾಜೀ ಮಾಡಿಕೊಂಡ ಕಾರಣ ನಾನು ನೋಟೀಸ್ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನಿಪಿ7 ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ನಂತರದಲ್ಲಿ ನಾನು ಆರೋಪಿಯನ್ನು ಭೇಟಿ ಮಾಡಿ ಆರೋಪಿಯಿಂದ 5 ಲಕ್ಷ ಹಣವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನಾನು ನಿಪಿ7 ಕ್ಕೆ ಸಂಬಂಧಪಟ್ಟಂತೆ ಯಾವುದೇ ನೋಟೀಸ್ ಹಾಗೂ ದೂರನ್ನು ಆರೋಪಿ ವಿರುದ್ದ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿ ಸ್ವತಃ ಉಳಿಕೆ 10 ಲಕ್ಷ ಹಣವನ್ನು ನಗದು ಮುಖಾಂತರ ನೀಡುತ್ತಾರೆಂದು ಭರವಸೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಕೇವಲ ಉಳಿಕೆ 5 ಲಕ್ಷ ಹಣವನ್ನು ನಿಪಿ1 ರ ಅಡಿ ನೀಡುವುದಾಗಿ ನನಗೆ ಭರವಸೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಹಣ ನೀಡುವ ಮುಂಚೆಯೇ ನಾನು ನಿಪಿ1 ನ್ನು ಬ್ಯಾಂಕ್ ಗೆ ಹಾಜರುಪಡಿಸಿ ಈ ಪಿರ್ಯಾದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣ ಹೂಡಿದ ನಂತರದಲ್ಲಿ 5 ಲಕ್ಷ ಹಣವನ್ನು ಆರೋಪಿ ನನ್ನ ಬ್ಯಾಂಕ್ ಖಾತೆಗೆ ಜಮೆ

ಮಾಡಿರುತ್ತಾರೆ ಎಂದರೆ ಸರಿ. ಆದಕಾರಣ ಆರೋಪಿಯು ನಾವು ನೀಡಿದ್ದ 10 ಲಕ್ಷ ರೂಪಾಯಿಗೆ ಸಂಬಂಧಪಟ್ಟಂತೆ 5 ಲಕ್ಷ ರೂಪಾಯಿ ನಗದು ಮೂಲಕ ಹಾಗೂ 5 ಲಕ್ಷ ಬ್ಯಾಂಕ್ ಮೂಲಕ ಮರು ಪಾವತಿ ಈಗಾಗಲೇ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಸರ್ಕಾರಿ ನೌಕರರಾಗಿದ್ದು ಅಕ್ರಮ ಲಾಭ ಪಡೆಯುವ ದುರುದ್ದೇಶದಿಂದ ಸುಳ್ಳು ಪಿರ್ಯಾದನ್ನು ದಾಖಲು ಮಾಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ1 ಮತ್ತು 7 ನ್ನು ಹೊರತುಪಡಿಸಿ ಆರೋಪಿಯ ಸಹಿ ಮಾಡಿರುವ 4 ಚೆಕ್ ಗಳು ನನ್ನ ಹಾಗೂ ಪ್ರಭುಕುಮಾರ್ ರವರ ಬಳಿ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ನನಗೆ ಪ್ರಸ್ತುತದಲ್ಲಿ ಯಾವುದೇ ಹಣ ನೀಡಲು ಭಾದ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಹಿಂದೆಯೇ 5 ಲಕ್ಷ ಹಣ ನಗದು ಮೂಲಕ ನೀಡಿದ್ದ ಕಾರಣ ನಾನು ನಿಪಿ7 ಕ್ಕೆ ಸಂಬಂಧಪಟ್ಟಂತೆ ಯಾವುದೇ ಪ್ರಕರಣ ನ್ಯಾಯಾಲಯದಲ್ಲಿ ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ 5 ಲಕ್ಷ ನಗದು ಮೂಲಕ ನೀಡಿದ್ದರು ನಾನು ನೀಡಿರುವುದಿಲ್ಲ ಎಂದು ಈ ದೂರು ಹೂಡಿದ ಕಾರಣ, ಪ್ರಕರಣ ಹೂಡಿದ ನಂತರದಲ್ಲಿ 5 ಲಕ್ಷ ಹಣವನ್ನು ಬ್ಯಾಂಕ್ ಮುಖಾಂತರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಪ್ರ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ತರೀಕೆರೆ
(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ::